ಮಾನ್ಯ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:12.02.2019 ರಂದು ಪೂರ್ವಾಹ್ನ 11:00 ಗಂಟೆಗೆ ಇಲಾಖೆಯ ಸಭಾ ಕೊಠಡಿಯಲ್ಲಿ ಸಕಾಲ ಸೇವೆಗಳ ಕಾಯ್ದೆ–2011 ರಡಿ ಗ್ರಾಮ ಪಂಚಾಯತಿಗಳಲ್ಲಿ ನೀಡುವ ಸಕಾಲ ಸೇವೆಗಳ ಬಗ್ಗೆ ಜರುಗಿದ ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)**

1. ಎಂ.ಕೆ. ಅಯ್ಯಪ್ಪ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
2. ಎಸ್.ಎಂ. ಜುಲ್ಫಿಖಾರ್‌ಉಲ್ಲಾ, ನಿರ್ದೇಶಕರು(ಇ–ಆಡಳಿತ) (ಪ್ರ), ಗ್ರಾಅಪ ಇಲಾಖೆ, ಬೆಂಗಳೂರು.
3. ಮುಬಾರಕ್ ಅಹ್ಮದ್, ಅಧೀನ ಕಾರ್ಯದರ್ಶಿಗಳು, ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
4. ವಿ. ವೆಂಕಟೇಶ್, ಅಧೀನ ಕಾರ್ಯದರ್ಶಿಗಳು, ಜಿ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
5. ನಿಂಗೇಗೌಡ, ಸಲಹೆಗಾರರು, ಜಿ.ಪಂ./ ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
6. ಗಗನ್ ಎ.ಎಸ್, ಸಹಾಯಕ ನಿರ್ದೇಶಕರು, ಇ–ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
7. ಶಿಲ್ಪ.ಈ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಯೋಜನೆ(ಇ–ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
8. ಪಿ. ಶ್ರೀಕೃಷ್ಣಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
9. ಎಂ.ಎಸ್. ವಿಜಯಲಕ್ಷ್ಮೀ, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
10. ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
11. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ–ಪಂಚಾಯತ್), ಗ್ರಾಅಪ ಇಲಾಖೆ.
12. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು (ಇ–ಪಂಚಾಯತ್), ಗ್ರಾಅಪ ಇಲಾಖೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು (ಇ–ಆಡಳಿತ) ರವರು ಸ್ವಾಗತಿಸಿದರು ಹಾಗೂ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು.

1. ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನಿರ್ದೇಶನದಂತೆ, ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದ್ದ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 43 ಸೇವೆಗಳನ್ನು 25 ಸೇವೆಗಳನ್ನಾಗಿ ಪರಿಷ್ಕರಿಸಲಾಗಿದೆ ಹಾಗೂ ಪರಿಷ್ಕೃತ ಸೇವೆಗಳ ವಿತರಣೆಯಲ್ಲಿ ಏಕರೂಪತೆ ತರುವ ಸಲುವಾಗಿ ಇ-ಸ್ವತ್ತು ತಂತ್ರಾಂಶದ ನಮೂನೆ 9 ಮತ್ತು ನಮೂನೆ 11A ಮಾದರಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ ಸಹಿಯೊಂದಿಗೆ ವಿತರಿಸಲು ಈಗಾಗಲೇ ತಂತ್ರಾಂಶವನ್ನು ಎನ್.ಐ.ಸಿ. ರವರಿಂದ ಅಭಿವೃದ್ಧಿ ಪಡಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

2. ಸದರಿ ಗ್ರಾಅಪ ಇಲಾಖೆಯ ಪರಿಷ್ಕೃತ 25 ಸೇವೆಗಳಲ್ಲಿ 23 ಸೇವೆಗಳಿಗೆ ತಂತ್ರಾಂಶವು ತಯಾರಿದ್ದು, ಈಗಾಗಲೇ ತಂತ್ರಾಂಶವನ್ನು Testing ಮಾಡಲಾಗಿದೆ ಮತ್ತು 23 ಸೇವೆಗಳ ಪ್ರಮಾಣ ಪತ್ರಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕಾರ ನಿಯಮಾನುಸಾರ ವಿನ್ಯಾಸಗೊಳಿಸಲಾಗಿದ್ದು, ವಿನ್ಯಾಸಗೊಳಿಸಲಾದ ಸೇವೆಗಳ ಪ್ರಮಾಣ ಪತ್ರಗಳನ್ನು ಪಂಚಾಯತ್ ರಾಜ್–1 ಶಾಖೆಯಿಂದ ಪರಿಶೀಲಿಸಿ, ದೃಢೀಕರಿಸಿದಲ್ಲಿ 23 ಸೇವೆಗಳನ್ನು ಅನುಷ್ಠಾನ ಮಾಡಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

3. **ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್) ಈ ಸಂಬಂಧವಾಗಿ ಸಭೆಯಲ್ಲಿ ಹಾಜರಿದ್ದ ಪಂಚಾಯತ್ ರಾಜ್–1 ಶಾಖೆಯ ಅಧಿಕಾರಿಗಳಿಗೆ ಕೂಡಲೇ ಸಭೆಯನ್ನು ಏರ್ಪಡಿಸಿ ವಿನ್ಯಾಸಗೊಳಿಸಲಾದ 23 ಸೇವೆಗಳ ನಮೂನೆಗಳನ್ನು ಪರಿಶೀಲಿಸಿ ದೃಢೀಕರಿಸುವಂತೆ ಸೂಚಿಸಿದರು. ಪರಿಶೀಲಿಸಿ ದೃಢೀಕರಿಸಿದ ನಂತರ ಸದರಿ 23 ಸೇವೆಗಳನ್ನು ಡಿಜಿಟಲ್ ಸಹಿ ಮುಖಾಂತರ ಅನುಷ್ಠಾನ ಮಾಡುವಂತೆ ನಿರ್ದೇಶಕರು(ಇ–ಆಡಳಿತ) ರವರಿಗೆ ಸೂಚಿಸಿದರು.**

4. ಪ್ರಸ್ತುತ ಗ್ರಾಅಪ ಇಲಾಖೆಯ 11 ಸೇವೆಗಳು ಸಕಾಲದಲ್ಲಿದ್ದು, ಕೆಲವು ಗ್ರಾಮ ಪಂಚಾಯತಿಯವರು ಸಕಾಲ ಸೇವೆಗಳನ್ನು bypass ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು.

5. ಸಿಆಸುಇ 297 ನಾಸೇಖಾ 2018 (ಭಾಗ-1), ದಿನಾಂಕ:01.03.2018 ರ ಸರ್ಕಾರದ ಆದೇಶದಂತೆ ಸಕಾಲದಡಿ ನೀಡುವ ಸೇವೆಗಳಿಗೆ ವಿತರಿಸುವ ಪ್ರಮಾಣ ಪತ್ರಗಳಿಗೆ ಜಿ.ಎಸ್.ಸಿ. ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವಂತೆ ಸೂಚಿಸಲಾಗಿದೆ. ಅದರಂತೆ ಪ್ರಸ್ತುತ ನೀಡಲಾಗುತ್ತಿರುವ ನಮೂನೆ 9 ಮತ್ತು 11 ಸೇವೆಗಳು ಸೇರಿದಂತೆ ವಿನ್ಯಾಸಗೊಳಿಸುವ 23 ಸೇವೆಗಳ ನಮೂನೆಗಳಲ್ಲಿ ಜಿ.ಎಸ್.ಸಿ. ಸಂಖ್ಯೆಯನ್ನು ಕಡ್ಡಾಯಗೊಳಿಸಬಹುದಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

6. ಸರ್ಕಾರದ ಕಾರ್ಯದರ್ಶಿ(ಪಂ.ರಾಜ್) ರವರು ಸಕಾಲ ಸೇವೆಗಳ ಪ್ರಮಾಣ ಪತ್ರಗಳಲ್ಲಿ ಜಿ.ಎಸ್.ಸಿ. ಸಂಖ್ಯೆಗಳನ್ನು ಕಡ್ಡಾಯಗೊಳಿಸಲು ತಂತ್ರಾಂಶಗಳಲ್ಲಿ ಸೂಕ್ತ ಮಾರ್ಪಾಡು ಮಾಡಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ತಂತ್ರಾಂಶಗಳಲ್ಲಿ ಮಾರ್ಪಾಡು ಮಾಡಿದ ನಂತರ ಎಲ್ಲಾ ಸರ್ಕಾರದ ಪ್ರಮಾಣ ಪತ್ರಗಳಲ್ಲಿ ಜಿ.ಎಸ್.ಸಿ. ಸಂಖ್ಯೆ ಹೊಂದಿರುವುದನ್ನು ಕಡ್ಡಾಯ ಮಾಡಲು ಹಾಗೂ ಜಿ.ಎಸ್.ಸಿ. ಸಂಖ್ಯೆ ಹೊಂದಿಲ್ಲದ ಪ್ರಮಾಣ ಪತ್ರಗಳನ್ನು ಮಾನ್ಯ ಮಾಡದೇ ಇರಲು ಸೂಕ್ತ ಆದೇಶ/ಸುತ್ತೋಲೆ ಹೊರಡಿಸಲು ಅಧೀನ ಕಾರ್ಯದರ್ಶಿಗಳು (ಪಂ.ರಾಜ್-1) ರವರಿಗೆ ಸೂಚಿಸಿದರು.

**ಕ್ರಮ: ನಿರ್ದೇಶಕರು(ಪಂ.ರಾಜ್-1)**

7. ತಾಂತ್ರಿಕ ಸಮಾಲೋಚಕರು ಸಭೆಯನ್ನುದ್ದೇಶಿಸಿ ಮಾತನಾಡಿ, ಸದರಿ 23 ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಿಸಲು Payment Gateway ಅವಶ್ಯಕತೆಯಿದ್ದು, Payment Gateway ಅನ್ನು ಪಡೆಯಲು Request for Proposal(RFP) ಅನ್ನು ಆಹ್ವಾನಿಸಲಾಗಿದೆ ಹಾಗೂ ತೆರಿಗೆ ವಸೂಲಾತಿಗಾಗಿ mobile app ಅನ್ನು ವಿನ್ಯಾಸಗೊಳಿಸಲು ಹಾಗೂ mPoS ಗಳನ್ನು ಬಾಡಿಗೆ ಪಡೆಯಲು RFP ಯಲ್ಲಿ ಸೇರಿಸಲಾಗಿದ್ದು, ಬ್ಯಾಂಕ್‌ನ ಆಯ್ಕೆ ಅಂತಿಮಗೊಂಡ ನಂತರ online ಮೂಲಕ ಸೇವೆಗಳನ್ನು ಒದಗಿಸಬಹುದು. online ಮೂಲಕ ಸೇವೆಗಳನ್ನು ಅನುಷ್ಠಾನಗೊಳಿಸುವ ಮುನ್ನ Budget & Accounting Rules ನಲ್ಲಿ ಆನ್‌ಲೈನ್ ತೆರಿಗೆ ಪಾವತಿಗಾಗಿ ಸೂಕ್ತ ಬದಲಾವಣೆ ಮಾಡುವ ಬಗ್ಗೆ ತಾಂತ್ರಿಕ ಸಮಾಲೋಚಕರು ಸಭೆಯ ಗಮನಕ್ಕೆ ತಂದರು. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್) ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಅಧೀನ ಕಾರ್ಯದರ್ಶಿಗಳು, (ಪಂ.ರಾಜ್-1) ರವರಿಗೆ ಸೂಚಿಸಿದರು. ಸದರಿ ವಿಷಯಗಳ ಬಗ್ಗೆ ನಿರ್ದೇಶಕರು(ಪಂ.ರಾಜ್-1) ರವರಿಗೆ ಈಗಾಗಲೇ ಅನಧಿಕೃತ ಟಿಪ್ಪಣಿ ದಿನಾಂಕ:29.01.2019 ಅನ್ನು ನೀಡಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

**ಕ್ರಮ: ನಿರ್ದೇಶಕರು(ಪಂ.ರಾಜ್-1)**

8. ಸರ್ಕಾರದ ಕಾರ್ಯದರ್ಶಿಗಳು Payment Gateway ಅನ್ನು ಬ್ಯಾಂಕ್‌ಗಳಿಂದ ಪಡೆದ ನಂತರ ಆನ್‌ಲೈನ್ ತೆರಿಗೆ ಪಾವತಿ (online Tax payment or e-Tax) module ಅನ್ನು ಅನುಷ್ಠಾನಗೊಳಿಸಲು ನಿರ್ದೇಶಕರು(ಇ-ಆಡಳಿತ)ರವರಿಗೆ ಸೂಚಿಸಿದರು ಹಾಗೂ e-Tax module ಅನ್ನು ವಿನ್ಯಾಸಗೊಳಿಸಲು ಎನ್.ಐ.ಸಿ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ನಿರ್ದೇಶಕರು(ಇ-ಆಡಳಿತ) ಹಾಗೂ ಎನ್.ಐ.ಸಿ.**

....3

9. ನಮೂನೆ-9 ಮತ್ತು ನಮೂನೆ-11 ಸೇವೆಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ ಸಹಿಯೊಂದಿಗೆ ವಿತರಿಸಲಾಗುತ್ತಿದ್ದು, Payment Gateway ಅನ್ನು ಬ್ಯಾಂಕ್‌ಗಳಿಂದ ಪಡೆದ ನಂತರ ಸದರಿ ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಿಸಲು ಮಾಡ್ಯೂಲ್ ಅನ್ನು ಸಿದ್ಧಪಡಿಸುವ ಅವಶ್ಯಕತೆ ಇರುತ್ತದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
10. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್) ಮೊದಲ ಹಂತದಲ್ಲಿ 23 ಸೇವೆಗಳನ್ನು ಅನುಷ್ಠಾನಗೊಳಿಸಿ ತದನಂತರ ನಮೂನೆ-9 ಮತ್ತು ನಮೂನೆ-11 ಸೇವೆಗಳನ್ನು ಆನ್‌ಲೈನ್ ಮೂಲಕ ವಿತರಿಸಲು ಕ್ರಮಕೈಗೊಳ್ಳುವಂತೆ ಅಧೀನ ಕಾರ್ಯದರ್ಶಿಗಳು(ಪಂ.ರಾಜ್-1) ಹಾಗೂ ನಿರ್ದೇಶಕರು(ಇ-ಆಡಳಿತ) ರವರಿಗೆ ಸೂಚಿಸಿದರು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಂ:**ಗ್ರಾಅಪ/19/ಗ.ಕೋಶ/2019
**ದಿನಾಂಕ:**13.02.2019

(ಎಂ.ಕೆ. ಅಯ್ಯಪ್ಪ, ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಅಧೀನ ಕಾರ್ಯದರ್ಶಿಗಳು, ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
2. ಅಧೀನ ಕಾರ್ಯದರ್ಶಿಗಳು, ಜಿ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
3. ನಿಂಗೇಗೌಡ, ಸಲಹೆಗಾರರು, ಜಿ.ಪಂ./ ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
5. ಶಿಲ್ಪ ಈ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಯೋಜನೆ(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
6. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಎಂ.ಎಸ್. ವಿಜಯಲಕ್ಷ್ಮೀ, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
8. ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
9. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
10. ತಾಂತ್ರಿಕ ಸಮಾಲೋಚಕರು (ಇ-ಪಂಚಾಯತ್), ಗ್ರಾಅಪ ಇಲಾಖೆ.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.